
ಭಾವಸಂಬಂಧಗಳು, ಸಾಮಾಜಿಕ ಕಟ್ಟುಪಾಡುಗಳು-ಜೀವಸಹಜ ಹುಟ್ಟುಹಾಡುಗಳು... ಹೀಗೆ ಹಲವು ರೂಪಗಳಲ್ಲಿ ಅವುಗಳ ಮುಖಾಮುಖಿ ಘಟಿಸುತ್ತಲೇ ಹೋಗುತ್ತವೆ. ಅವುಗಳೇ ಈ ಕಥನವನ್ನು ಮುನ್ನಡೆಸುವ ಚಾಲಕಶಕ್ತಿಯಾಗಿಯೂ ಕೆಲಸ ಮಾಡುತ್ತವೆ. ಅವುಗಳ ಉಜ್ಜುವಿಕೆಯಿಂದಲೇ ಜೀವನಸತ್ಯದ ಕಿಡಿಯನ್ನು ಹಚ್ಚಲು ಯತ್ನಿಸುತ್ತದೆ ಈ ಕಾದಂಬರಿ.

ಮೊದಲನೇ ಅಧ್ಯಾಯದಲ್ಲಿಯೇ ಬರುವ ಸಾಲುಗಳು ಹೀಗಿವೆ: “ಅವನು ಅಲ್ಲೆ ರಸ್ತೆಯ ಬದಿಯಲ್ಲಿ ಮೈ ಹರಡಿಕೊಂಡಿರುವ ಕಸದ ರಾಶಿಯಲ್ಲಿ ಹಿತವಾಗಿ ಕೈಯಾಡಿಸುತ್ತಲಿದ್ದ. ಅಸ್ತವ್ಯಸ್ತ ಬಿದ್ದಿರುವ ನಶೆಹೊತ್ತ ತರುಣಿಯ ಮೈಮೇಲೆ ಕೈಯಾಡಿಸುವಂತೆ. ಅವಳು ಒಂದು ಕ್ಷಣ ತನ್ನ ಸ್ಮೃತಿಯೊಳಗಿನ ಬಟ್ಟೆಗಳನ್ನು ಕಿತ್ತೆಸೆದು ಅವನನ್ನೇ ನೋಡತೊಡಗಿದಳು.” ಈ ಸಾಲುಗಳನ್ನು ಓದಿದ ತಕ್ಷಣ ನಮ್ಮ ಮನಸಲ್ಲಿ ಹುಟ್ಟುವ ರಮ್ಯವಾದ ಭಾವಕ್ಕೂ ಅದು ವಾಸ್ತವದಲ್ಲಿ ಹೇಳುತ್ತಿರುವುದಕ್ಕೂ ಎಂಥ ವ್ಯತ್ಯಾಸವಿದೆ. ಮೊದಲ ಸಾಲುಗಳನ್ನು ಓದಿದಾಗ ನಮ್ಮ ಮನಸ್ಸಲ್ಲಿ ಮೂಡುವುದು ನಶೆಹೊತ್ತ ತರುಣಿಯ ಮೈಮೇಲೆ ಕೈಯಾಡಿಸುತ್ತಿರುವ ಪುರುಷನ ಚಿತ್ರ! ಆದರೆ ಅವನು ನಿಜಕ್ಕೂ ಕೈಯಾಡಿಸುತ್ತಿರುವುದು ಕಸದ ರಾಶಿಯ ಮೇಲೆ! ನಂತರದ ಸಾಲನ್ನೂ ಗಮನಿಸಿ, ಅವಳು ಕಿತ್ತೆಸೆದಿದ್ದು ಅವಳ ಸ್ಮೃತಿಯೊಳಗಿನ ಬಟ್ಟೆಗಳನ್ನು. ಆ ಸ್ಮೃತಿಯೊಳಗೆ ಇರುವುದೂ ಅವಳು ತೊಟ್ಟ ಬಟ್ಟೆಗಳನ್ನಲ್ಲ, ಒಣಹಾಕಿದ ಬಟ್ಟೆಗಳು! ಕಾವ್ಯಶಕ್ತಿಯಿಂದ ಬೆಳಗುವ ಈ ಸಾಲುಗಳು, ‘ಬಟ್ಟೆ ಕಿತ್ತೆಸೆಯುವುದು’ ಎಂಬ ನುಡಿಗಟ್ಟೊಂದು ನಮ್ಮ ಮನದಲ್ಲಿ ಹುಟ್ಟಿಸುವ ಉದ್ರೇಕಕಾರಿ ಬಿಂಬಗಳನ್ನು, ಆ ಬಿಂಬವನ್ನು ಹೊತ್ತ ನಮ್ಮ ಸ್ಮೃತಿಯನ್ನು ವ್ಯಂಗ್ಯದಿಂದ ನೋಡುತ್ತ ಒಡೆಯುತ್ತದೆ. ಮತ್ತೆ ಇವೆಲ್ಲವೂ ಕಥನದ, ಪಾತ್ರದ ಒಳಗಿನಿಂದಲೇ ಹುಟ್ಟಿದ್ದು; ತುರುಕಿದ್ದಲ್ಲ. ಇಂಥ ವಾಕ್ಯಗಳು ಬರೀ ಬರಹಗಾರನ ಬುದ್ಧಿವಂತಿಕೆಯಿಂದ ಹುಟ್ಟುವುದಿಲ್ಲ; ಅವನನ್ನೂ ಮೀರಿದ ಅಮೂರ್ತ ಗಳಿಗೆಯಲ್ಲಿ ಅಯಾಚಿತವಾಗಿ ಹುಟ್ಟುವಂಥವು; ಬೆಳಗುವಂಥವು.

ಜಕ್ಕನೇ ಹಿಡಿದು ನಿಲ್ಲಿಸುವ, ಅಲ್ಲಾಡಿಸುವ ಶಕ್ತಿ ಇರುವ ಇಂಥ ಹಲವು ವಾಕ್ಯಗಳು ಕಾದಂಬರಿಯುದ್ದಕ್ಕೂ ಅಲ್ಲಲ್ಲಿ ಸಿಕ್ಕುತ್ತವೆ. ಒಂದಕ್ಕೊಂದು ಕೈಜೋಡಿಸಿಕೊಂಡು ಒಂದು ಜೀವನದರ್ಶನವನ್ನು ಹೊಳೆಯಿಸಲು ಯತ್ನಿಸುತ್ತಿರುವಂತೆಯೂ ಭಾಸವಾಗುತ್ತವೆ. ಆದರೆ, ಅದು ಓದುಗರಿಗೆ ಕಾಣಿಸುತ್ತದೆಯೋ ಇಲ್ಲವೋ ಎಂಬ ಲೇಖಕರ ಆತಂಕದಿಂದ ಹುಟ್ಟಿದ ವಾಚ್ಯ-ವಾಚಾಳಿತನವೇ ಆ ದರ್ಶನವನ್ನು ಮಂಕಾಗಿಸಿದೆ.




ಪುಸ್ತಕದ ಹೆಸರು: ಮಂಪರು
ಲೇ: ಚೀಮನಹಳ್ಳಿ ರಮೇಶಬಾಬು
ಪು: 208 ಬೆ: 240
ಪ್ರಕಾಶನ: ಅನಿಮ ಪ್ರಕಾಶನ,
ಫೋನ್: 9845875423

ಅಂತರಂಗ-ಬಹಿರಂಗ ಎನ್ನುವುದು ಈ ಕಾದಂಬರಿಯ ಹೆಣಿಗೆಯ ಬಹುಮುಖ್ಯ ಎಳೆಗಳಾದರೆ ಅದು ವಿಸ್ತರಿಸುತ್ತ ಹೋಗುವುದು ನೆನಪು-ವಾಸ್ತವಗಳೆಂಬ ಪಾತ್ರಗಳ ಮೂಲಕ. ಇಲ್ಲಿನ ಮುಖ್ಯಪಾತ್ರಗಳಾದ ಸುಮನ, ರತ್ನಾಕರ, ರೇಣುಕಾ, ರಾಜೀವರಿಗೆ ಒಂದು ದಟ್ಟವಾದ ಭೂತಜೀವನವಿದೆ. ಆ ಬದುಕಿನ ಮೆಲುಕಿನಲ್ಲಿಯೇ ಅವರು ವಾಸ್ತವದ ಬದುಕನ್ನು ಬದುಕುತ್ತಿದ್ದಾರೆ. ಬಾಲ್ಯದಲ್ಲಿ ಗುಪ್ತವಾಗಿ